# ‘ಮದಕರಿ’ ಅಥವಾ ‘ಮೆದಕೇರಿ’ ಒಂದು ಜಿಜ್ಞಾಸೆಯ ಅಸ್ಮಿತೆ: ಚಾರಿತ್ರಿಕ ವಿಶ್ಲೇಷಣೆ

**ರೇವಣಸಿದ್ದಪ್ಪ ಎಸ್.***

**DOI: https://doi.org/10.5281/zenodo.22301161**

**ABSTRACT**

ಚಿತ್ರದುರ್ಗದ ಪಾಳೆಯಗಾರರ ಚರಿತ್ರೆಯಲ್ಲಿ ‘ಮದಕರಿ’ ಮತ್ತು ‘ಮೆದಕೇರಿ’ ಪದಗಳ ಬಳಕೆಯ ಕುರಿತಾದ ಜಿಜ್ಞಾಸೆಯನ್ನು ಇಲ್ಲಿ ಐತಿಹಾಸಿಕವಾಗಿ ವಿಶ್ಲೇಷಿಸಲಾಗಿದೆ. ಶಾಸನಗಳ ಆಧಾರದ ಮೇಲೆ ಡಾ. ಬಿ. ರಾಜಶೇಖರಪ್ಪನವರಂತಹ ವಿದ್ವಾಂಸರು ‘ಮೆದಕೇರಿ’ ಎಂಬುದು ಶಾಸನೋಕ್ತ ಹಾಗೂ ನಿಖರವಾದ ವ್ಯಕ್ತಿನಾಮ ಎಂದು ಪ್ರತಿಪಾದಿಸುತ್ತಾರೆ. ಆದರೆ, ದೆಹಲಿ ಸುಲ್ತಾನರ ಮದಿಸಿದ ಆನೆಯನ್ನು ಪಳಗಿಸಿದ ಸಾಹಸದ ಹಿನ್ನೆಲೆಯಲ್ಲಿ ಹುಟ್ಟಿದ ‘ಮದಕರಿ’ ಎಂಬ ಬಿರುದನ್ನೇ ಜನಪದರು ಹಾಗೂ ಸಮಕಾಲೀನ ಸಮಾಜವು ಅತೀವ ಅಭಿಮಾನದಿಂದ ಸ್ವೀಕರಿಸಿದೆ. ಆಡಳಿತಾತ್ಮಕ ಶಾಸನಗಳಲ್ಲಿ ‘ಮೆದಕೇರಿ’ ಎಂದು ದಾಖಲಾಗಿದ್ದರೂ, ಜನಮಾನಸದಲ್ಲಿ ‘ಮದಕರಿ’ ಎಂಬುದು ಕೇವಲ ಹೆಸರಾಗಿರದೆ, ಇಡೀ ನಾಯಕ ಜನಾಂಗದ ಸಾಂಸ್ಕೃತಿಕ ಹಾಗೂ ಶೌರ್ಯದ ಅಸ್ಮಿತೆಯಾಗಿ ಇಂದಿಗೂ ಪ್ರಚಲಿತದಲ್ಲಿದೆ. ಚರಿತ್ರೆಕಾರರ ಲಿಖಿತ ದಾಖಲೆಗಳಿಗಿಂತ ಜನಪದರು ಕಟ್ಟಿಕೊಟ್ಟಿರುವ ಮೌಖಿಕ ಪರಂಪರೆಯ ‘ಮದಕರಿ’ ಪದವು ವರ್ತಮಾನದ ಸಾಂಸ್ಕೃತಿಕ ಜೀವಂತಿಕೆಯ ಸಂಕೇತವಾಗಿ ಉಳಿದುಕೊಂಡಿದೆ.

**KEYWORDS:** ಚಿತ್ರದುರ್ಗದ ಪಾಳೆಯಗಾರರು, ಮದಕರಿ, ಮೆದಕೇರಿ, ಸಾಂಸ್ಕೃತಿಕ ಅಸ್ಮಿತೆ, ಜನಪದ ಪರಂಪರೆ.

* **ಡಾ. ರೇವಣಸಿದ್ದಪ್ಪ ಎಸ್.,** ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.

ಇಂದಿನ ನಮ್ಮ ತಲೆಮಾರಿನ ಯುವಕರಿಗೆ ಚಿತ್ರದುರ್ಗದರಸರು ಚರಿತ್ರೆಯ ಪ್ರತೀಕಗಳಾಗಿ, ಜನಾಂಗದ ಅಸ್ಮಿತೆಯ ಸಂಕೇತಗಳಾಗಿ ಉಳಿದಿದ್ದಾರೆ. ಅಂಥದರಲ್ಲಿ ಚಿತ್ರದುರ್ಗದರಸರ 'ರಾಜಾ ವೀರಮದಕರಿ ನಾಯಕ'ನ ಮೂರ್ತಿ, 'ಮದಕರಿ' ಎಂಬ ಅಭಿದಾನ, 'ಮದಿಸಿದ ಕರಿಯ ಮದವಡಗಿಸುತ್ತಿರುವ ಮದಕರಿ'ಯ ಮತ್ತು 'ಮದಕರಿ ಖಡ್ಗ'ದ ಚಿತ್ರಗಳು ಕರ್ನಾಟಕದ ನಾಯಕ ಜನಾಂಗಕ್ಕೆ ಸಾಂಸ್ಕೃತಿಕ ಅಸ್ಮಿತೆಯಾಗಿರುವುದು ವರ್ತಮಾನದ ಜೀವಂತಿಕೆಯ ಲಕ್ಷಣವೇ ಸರಿ. ಒಂದು ಕಾಲಘಟ್ಟದಲ್ಲಿದ್ದ ರಾಜ, ರಾಜಮನೆತನ ಮತ್ತು ಆ ರಾಜರು ಹೊಂದಿದ್ದ ಬಿರುದುಗಳು ಸ್ಥಾನಮಾನಗಳು ವರ್ತಮಾನದ ಜನಾಂಗವೊಂದರ ಸಾಂಸ್ಕೃತಿಕ ಪರಂಪರೆಗೆ ಮುಂದಾಳಾಗುವುದನ್ನು 'ಅಪಮಾನ'ವೆಂದು ಭಾವಿಸದೆ 'ಅಭಿಮಾನ'ವೆಂದೇ ಭಾವಿಸಬೇಕು. ಏಕೆಂದರೆ, ಅದರಲ್ಲಿ ಒಂದು ಕಾಲದ ಸಂಸ್ಕೃತಿ ನಮ್ಮ ವರ್ತಮಾನದಲ್ಲಿ ಜೀವಿಸುತ್ತಿರುತ್ತದೆ.

ಕ್ರಿ.ಶ. ಹದಿನೈದನೆಯ ಶತಮಾನದಿಂದ ಹದಿನಾರನೆಯ ಶತಮಾನದ ಪ್ರಥಮಾರ್ಧದವರೆಗೆ ವಿಜಯನಗರ ಸಾಮ್ರಾಜ್ಯದ ಸಾಮಂತ ಅಮರನಾಯಂಕರರಾಗಿ ಆಳ್ವಿಕೆ ನಡೆಸಿದ್ದ ಚಿತ್ರದುರ್ಗದರಸರು ಹದಿನಾರನೆಯ ಶತಮಾನದ ದ್ವಿತೀಯಾರ್ಧದಿಂದ ಹದಿನೆಂಟನೆಯ ಶತಮಾನದ ಪ್ರಥಮಾರ್ಧದವರೆಗೆ ವಿಜಯನಗರ ಪತನಾನಂತರ ಸ್ವತಂತ್ರ ಪಾಳೆಯಗಾರರಾಗಿ, ಮಧ್ಯಯುಗೀನ ಮಧ್ಯಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಆಳ್ವಿಕೆ ನಡೆಸಿದ್ದಾರೆ. ಸಮರ್ಥ ಆಳ್ವಿಕೆ ನಡೆಸಿದ್ದ ಚಿತ್ರದುರ್ಗ ಸಂಸ್ಥಾನ ಹದಿನೆಂಟನೆಯ ಶತಮಾನದ ದ್ವಿತೀಯಾರ್ಧದ ಭಾಗದಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಅಧೀನಕ್ಕೆ ಒಳಗಾಗಿ ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿತು. ಇವರ ಚರಿತ್ರೆಯನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಆರಂಭದಿಂದ ಅಂತ್ಯದವರೆಗೂ ತಮ್ಮ ಬದುಕಿನ ಉದ್ದಕ್ಕೂ ಧೈರ್ಯ ಸಾಹಸಗಳಿಂದ ಹೋರಾಟ ನಡೆಸಿರುವುದು ಕಂಡುಬರುವುದರಿಂದ, ಇವರದೊಂದು ಯೋಧ ಜನಾಂಗವೇ ಸರಿ.

ಕ್ರಿ.ಶ. 1549ರ ವೇಳೆಗೆ ಚಿತ್ರದುರ್ಗ ಪಾಳೆಯಗಾರರ ವಂಶಸ್ಥಾಪಕನಾದ ಮತ್ತಿ ತಿಮ್ಮಣ್ಣನಾಯಕ 'ಶ್ರೀಮನ್ಮಹಾನಾಯಕಾಚಾರ್ಯ' ಎಂಬ ಸ್ಥಾನ ಗೌರವ ಪಡೆದು ಪ್ರಾಂತ್ಯಪಾಲಕನಾಗಿದ್ದನ್ನು ಪರಿಗಣಿಸಿದರೆ ಅಂದರೆ, ಕ್ರಿ.ಶ. 1549 ರಿಂದ 1779 ರವರೆಗೆ (ಸಂಸ್ಥಾನ ಹೈದರಾಲಿಯ ವಶವಾಗುವವರೆಗೆ) ಒಟ್ಟು 231 ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದಾರೆ. ಇದರಿಂದ ಕನಿಷ್ಠ ಕ್ರಿ.ಶ. 1549 ರಿಂದ 1779ರಲ್ಲಿ ಈ ಸಂಸ್ಥಾನ ಹೈದರಾಲಿಯ ವಶವಾಗುವವರೆಗೆ ಸುಮಾರು 231 ವರ್ಷಗಳ ಕಾಲ ಇವರ ಆಳ್ವಿಕೆ ನಡೆಯಿತು ಎಂದು ಇಟ್ಟುಕೊಳ್ಳಬಹುದು. ಆದರೆ, ಡಾ. ಬಿ. ರಾಜಶೇಖರಪ್ಪ ಇವರನ್ನು ಹೊರತುಪಡಿಸಿ ಚಿತ್ರದುರ್ಗ ಪಾಳೆಯಗಾರರ ಕುರಿತು ಅಧ್ಯಯನ ಕೈಗೊಂಡಿರುವ ಬಹುತೇಕ ಸಂಶೋಧಕರು ಕ್ರಿ.ಶ. 1568 ರಿಂದ 1779ರ ವರೆಗೆ ಇನ್ನೂರ ಹನ್ನೊಂದು ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ ಎಂಬ ಅಭಿಪ್ರಾಯದಲ್ಲಿದ್ದಾರೆ.

ಸುಮಾರು 211 ರಿಂದ 231 ವರ್ಷಗಳ ಆಳ್ವಿಕೆ ನಡೆಸಿರುವ ಚಿತ್ರದುರ್ಗ ಪಾಳೆಯಗಾರರ ಚರಿತ್ರೆಯಲ್ಲಿ ಅವರು ಮಾಡಿರುವ ಹಲವು ಸಾಂಸ್ಕೃತಿಕ ಸಾಧನೆಗಳ ಕುರುಹುಗಳು ನಾಡುನಾಧ್ಯಂತ ಮನೆಮಾತಾಗಿವೆ. ಅದೇ ರೀತಿ ಅವರು ಹೊಂದಿದ್ದ ಶ್ರೀಮನ್ಮಹಾನಾಯಕಾಚಾರ್ಯ, ಹಗಲು ಕಗ್ಗೊಲ್ಲೆಮಾನ್ಯ, ಬಿರುದುಗಳಿಗಿಂತ ಅವರ ಮದಕರಿನಾಯಕ ಎಂಬ ಬಿರುದು ಹೆಚ್ಚು ಚರ್ಚೆಗೆ ಒಳಪಟ್ಟಿರುವ ಅಭಿದಾನವಾಗಿದೆ. ಹಲವು ಬಾರಿ ಚಿತ್ರದುರ್ಗ ಪಾಳೆಯಗಾರರ ಸಂಶೋಧಕರ ನಡುವಿನ ಮಾತಿನ ಸಂಘರ್ಷಕ್ಕೆ ಕಾರಣವಾಗಿದೆ. ಚಿತ್ರದುರ್ಗ ಪಾಳೆಯಗಾರರ ಶಾಸನೋಕ್ತ ಮೆದಕೇರಿಯಾಗಿ ದಾಖಲಾಗಿರುವ ಜನ ಬಳಕೆಯ ಮದಕರಿ ಎಂಬ ಪದ ಹಲವು ವಾದ-ಪ್ರತಿವಾದ ಮತ್ತು ಸಂವಾದಗಳಿಗೆ ಕಾರಣವಾಗಿದೆ. ಪ್ರಸ್ತುತ ಲೇಖನ ಈ ಕುರಿತು ಒಂದಷ್ಟು ವಿಶ್ಲೇಷಿಸುವ ಉದ್ದೇಶವನ್ನು ಒಳಗೊಂಡಿದೆ.

ಮದಕರಿ ಅಥವಾ ಮೆದಕೇರಿ ಪದದ ಕುರಿತು ವಿದ್ವಾಂಸರಲ್ಲಿ ಒಂದಾಭಿಪ್ರಾಯ ಇಲ್ಲ. ಆ ಪದ ಅನೇಕಾಭಿಪ್ರಾಯಗಳಿಗೆ ಒಳಗಾಗಿದೆ. ಚಿತ್ರದುರ್ಗ ನಾಯಕರು ಹೊಂದಿದ್ದ ಅನೇಕ ಬಿರುದುಗಳಲ್ಲಿ ಒಂದಾಗಿರುವ ಮದಕರಿ ಅಥವ ಮೆದಕೇರಿ ಪರಸ್ಪರ ಪರ-ವಿರೋಧ ಚರ್ಚೆಗೆ ಮುಖಾಮುಖಿಯಾಗಿ ಜಿಜ್ಞಾಸೆಗೂ ಕಾರಣವಾಗಿದೆ. ಸಮಕಾಲೀನ ಸಂದರ್ಭದಲ್ಲಿ 'ಮದಕರಿ' ಎಂಬುದು ಕೇವಲ ಒಂದು ಸಂಸ್ಥಾನದ, ಯಾವೊಬ್ಬ ರಾಜನ ಬಿರುದಾಗಿರದೆ ಒಂದು ಜನಾಂಗದ ಅಸ್ಮಿತೆಯಾಗಿ ಬಳಕೆಯಾಗುತ್ತಿದೆ. ಸಮಕಾಲೀನ ಕರ್ನಾಟಕದ ನಾಯಕ(ಬೇಡ) ಜನಾಂಗ ತನ್ನ ಜನಾಂಗೀಯ ಅಸ್ಮಿತೆಯಾಗಿ 'ಮದಕರಿ' ಎಂಬ ಪದವನ್ನು, ಜೊತೆಗೆ 'ವಾಲ್ಮೀಕಿ' ಎಂಬ ಪದವನ್ನೂ ಬಳಕೆ ಮಾಡುತ್ತಿದೆ. ಅಂದರೆ, ಚಿತ್ರದುರ್ಗ ಪಾಳೆಯಗಾರರ 'ಸಾಹಸ ಅಸ್ಮಿತೆ'ಯಾಗಿದ್ದ 'ಮದಕರಿ' ಪಾಳೆಯಗಾರೋತ್ತರ ಕಾಲದಲ್ಲಿ 'ವ್ಯಕ್ತಿ ಅಸ್ಮಿತೆ'ಯಾಗಿ ಬಳಕೆಯಾಗುತ್ತಿತ್ತು. ಸಮಕಾಲೀನ ಸಂದರ್ಭದಲ್ಲಿ ಮದಕರಿ ಎಂಬುದು 'ಜನಾಂಗೀಯ ಅಸ್ಮಿತೆ'ಯ ಪದವಾಗಿ ಬಳಕೆಯಾಗುತ್ತಿದೆ. ಇದು ಅದರ ಮೌಲ್ಯಮಾಪನ ಪ್ರಕ್ರಿಯೆಯ ನಿರಂತರತೆಯನ್ನು ತೋರಿಸುತ್ತದೆ. ಒಂದು ಕಾಲಘಟ್ಟದಲ್ಲಿದ್ದ ರಾಜಮನೆತನ, ರಾಜ ಮತ್ತು ರಾಜನ ಬಿರುದುಗಳು ವರ್ತಮಾನದ ಜನಾಂಗವೊಂದರ ಸಾಂಸ್ಕೃತಿಕ ಪರಂಪರೆಗೆ ಮುಂದಾಳಾಗುವುದನ್ನು 'ಅಪಮಾನ'ವೆಂದು ಭಾವಿಸುವುದಕ್ಕಿಂತ 'ಅಭಿಮಾನ'ವೆಂದು ಭಾವಿಸಬೇಕು. ಏಕೆಂದರೆ, ಅದರಲ್ಲಿ ಒಂದು ಜನಾಂಗದ ಸಂಸ್ಕೃತಿ ಜೀವಿಸುತ್ತಿರುತ್ತದೆ.

ಚಿತ್ರದುರ್ಗ ಪಾಳೆಯಗಾರರ ರಾಜಕೀಯ ಚರಿತ್ರೆಯನ್ನು ಅವಲೋಕಿಸಿದರೆ, ಚಿತ್ರದುರ್ಗ ಸಂಸ್ಥಾನವನ್ನು ಆಳ್ವಿಕೆ ಮಾಡಿರುವ ಒಟ್ಟು ಹದಿನಾರು ಅರಸರಲ್ಲಿ ಏಳು ಅರಸರು ಮದಕರಿ ನಾಯಕ ಅಥವಾ ಮೆದಕೇರಿ ನಾಯಕ ಎಂದು ಕರೆಯಲ್ಪಟ್ಟಿದ್ದಾರೆ, ಅವರೆಂದರೆ, 1ನೇ ಮದಕರಿನಾಯಕ, 1ನೇ ಇಮ್ಮಡಿ ಮದಕರಿನಾಯಕ, 2ನೇ ಇಮ್ಮಡಿ ಮದಕರಿನಾಯಕ, ಮುಮ್ಮಡಿ ಮದಕರಿನಾಯಕ, ಹಿರೇಮದಕರಿನಾಯಕ, ರಾಜಾ ದೊಡ್ಡ ಮದಕರಿನಾಯಕ ಮತ್ತು ರಾಜಾ ವೀರಮದಕರಿ ನಾಯಕ. ಆದರೆ, ಚಿತ್ರದುರ್ಗ ಸಂಸ್ಥಾನವನ್ನು ಆಳಿರುವ ಈ ಅರಸರನ್ನು ಶಾಸನಗಳು 'ಮೆದಕೇರಿನಾಯಕ,

ಮೆದಕೆರೆನಾಯಕ, ಮದಿಕೆರೆ ನಾಯಕ, ಮದಕೇರಿನಾಯಕ' ಎಂದು ದಾಖಲಿಸಿಕೊಂಡಿವೆ. ಆದರೆ, ಈ ಅರಸರನ್ನು 'ಮದಕರಿನಾಯಕ' ಎಂದು ಕರೆಯಲಾಗುತ್ತಿದೆ.

ಕ್ಷೇತ್ರಕಾರ್ಯದಲ್ಲಿ ನಾನು ಶೋಧಿಸಿರುವ ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿಯ ಉಳುಪಿನಕಟ್ಟೆ ಗ್ರಾಮದ ಶ್ರೀಮರುಳಸಿದ್ಧ ದೇವರ ಪಾದಗಟ್ಟೆಯ ಬಳಿಯಿರುವ, ಚಿತ್ರದುರ್ಗದ ಅರಸ ಹಿರೇಮದಕರಿನಾಯಕನಿಗೆ ಸಂಬಂಧಿಸಿರುವ ಅಪ್ರಕಟಿತ ಶಾಸನದಲ್ಲಿ 'ಕಾಮಗೇತಿ ಮೆದಕೆರಿನಾಯಕ' ಎಂದು ದಾಖಲಾಗಿದೆ. ಚಿತ್ರದುರ್ಗ ಪಾಳೆಯಗಾರರ ಕುರಿತು ಪ್ರಥಮವಾಗಿ ಅಧ್ಯಯನ ನಡೆಸಿರುವ ಎಂ.ಎಸ್. ಪುಟ್ಟಣ್ಣ, ಈ ಪಾಳೆಯಗಾರರ ಕುರಿತು ಸಮಗ್ರ ಅಧ್ಯಯನ ನಡೆಸಿರುವ ಪ್ರೊ. ಲಕ್ಷ್ಮಣ್ ತೆಲಗಾವಿ, ಹುಲ್ಲೂರು ಶ್ರೀನಿವಾಸ ಜೋಯಿಸ, ಶ್ರೀಶೈಲ ಆರಾಧ್ಯ, ಚಿತ್ರದುರ್ಗ ಪಾಳೆಯಗಾರರ ಖಾಸಾ ವಂಶಿಕರಾದ ಬಿ. ಎಸ್. ಶ್ರೀನಿವಾಸನಾಯಕ ಮೊದಲಾದವರು ತಮ್ಮ ಸಂಶೋಧನಾ ಕೃತಿಗಳಲ್ಲಿ ಈ ಮೇಲ್ಕಾಣಿಸಿರುವ ಪಾಳೆಯಗಾರರನ್ನು 'ಮದಕರಿನಾಯಕ' ಎಂದು ದಾಖಲಿಸಿದ್ದಾರೆ. ಆದರೆ, ಚಿತ್ರದುರ್ಗ ಪಾಳೆಯಗಾರರ ಶಾಸನಗಳನ್ನು ಕುರಿತು ಸೂಕ್ಷ್ಮ ಸಂಶೋಧನೆ ನಡೆಸಿರುವ ಡಾ. ಬಿ. ರಾಜಶೇಖರಪ್ಪನವರು ತಮ್ಮ ಕೃತಿಗಳಲ್ಲಿ ಈ ಮೇಲ್ಕಾಣಿಸಿರುವ ಅರಸರನ್ನು 'ಮೆದಕೇರಿನಾಯಕ'ರೆಂದು ದಾಖಲಿಸಿದ್ದಾರೆ.

ಸಮಕಾಲೀನ ಸಂದರ್ಭದ ಜನಮಾನಸದಲ್ಲಿ ಈ ನಾಯಕರೆಲ್ಲಾ 'ಮದಕರಿ ನಾಯಕ' ಎಂದೇ ಕರೆಯಲ್ಪಡುತ್ತಿದ್ದಾರೆ. ಇದು ಎಲ್ಲೋ ಒಂದು ಕಡೆ ಕೇಳುಗರ, ಓದುಗರ, ಅಧ್ಯಯನಕಾರರ ಹಾಗೂ ಸಂಶೋಧಕರ ಜಿಜ್ಞಾಸೆಗೆ ಕಾರಣವಾಗುತ್ತಿದೆ. ಆ ಹಿನ್ನೆಲೆಯಲ್ಲಿ ಮದಕರಿ ಅಥವಾ ಮೆದಕೇರಿ ಪದಗಳ ಕುರಿತ ಜಿಜ್ಞಾಸೆಯ ಅಸ್ಮಿತೆಯನ್ನು ಕುರಿತು ಚರ್ಚಿಸುವುದು ಇಲ್ಲಿ ಸೂಕ್ತವೆನಿಸುತ್ತದೆ.

ವರ್ತಮಾನದ ಚೌಕಟ್ಟಿನಲ್ಲಿರುವ ನಾವ್ಯಾರೂ ಬದುಕಿರದಿದ್ದ ಗತದ ಬಗ್ಗೆ ನಮಗೆಲ್ಲಾ ಅದಮ್ಯ ವ್ಯಾಮೋಹ ಇದ್ದೇ ಇರುತ್ತದೆ. ಈ ನಿಟ್ಟಿನಲ್ಲಿ 'ಮದಕರಿನಾಯಕ' ಎಂಬ ಪದ ಕುರಿತ ವ್ಯಾಮೋಹ ತುಸು ಹೆಚ್ಚೇ ಆಗಿದೆ. ಕಾರಣ, ಒಂದು ಕಾಲಕ್ಕೆ 'ನೆಲ' ವಾಚಕವಾಗಿ ಬಳಕೆಯಲ್ಲಿದ್ದ ಪದವು 'ಬಲ' ವಾಚಕವಾಗಿ ಬಳಕೆಯಾದುದರ ಮೌಲ್ಯಮಾಪನಕ್ಕೆ ಸಂಶೋಧಕರು ಮುಂದಾಗಬೇಕಿದೆ. ಏಕೆಂದರೆ, ಯಾರು ಆಳುತ್ತಾರೋ ಅವರ ಧೋರಣೆಗಳಿಗೆ ಅನುಗುಣವಾಗಿ ಅವರು ಹೊಂದಿರುವ ಬಿರುದುಗಳ ಮೌಲ್ಯಮಾಪನ ನಡೆಯುತ್ತಲೇ ಇರುತ್ತದೆ. ರಾಜಾ ವೀರಮದಕರಿ ನಾಯಕನ ಕುರಿತ ಲೇಖನ ಇದಾಗಿರುವುದರಿಂದ ಸಂಸ್ಥಾನದ ಕೊನೆಯ ದೊರೆ ಮದಕರಿ ನಾಯಕನೆ? ಅಥವಾ ಮೆದಕೇರಿ ನಾಯಕನೆ? ಎಂಬ ಪ್ರಶ್ನೆ ಎದುರಾಗುವುದು ಸಹಜ.

ಚಿತ್ರದುರ್ಗ ಪಾಳೆಯಗಾರರನ್ನು 'ಮದಕರಿ ನಾಯಕರು' ಎಂದು ಕರೆಯುತ್ತಿರುವುದೇನೋ ಸರಿ, ಆದರೆ, ಈ ಸಂಸ್ಥಾನವನ್ನು ಆಳಿದ ಎಲ್ಲಾ

ಪಾಳೆಯಗಾರರೂ ಮದಕರಿ ನಾಯಕ ಎಂಬ ಹೆಸರನ್ನು ಹೊಂದಿರಲಿಲ್ಲ. ಈ ಹೆಸರಿನ ಒಟ್ಟು ಏಳು ಜನ ಆಳ್ವಿಕೆ ನಡೆಸಿದ್ದಾರೆ. ಆದರೆ, ಈ ನಾಯಕರ ಶಾಸನಗಳಲ್ಲಿ 'ಮದಕರಿ' ಎಂದು ದಾಖಲುಗೊಳ್ಳದೇ, 'ಮೆದಕೇರಿ' ಎಂದು ದಾಖಲಾಗಿರುವುದರ ಹಿನ್ನೆಲೆಯಲ್ಲಿ, ಈ ಕುರಿತು ಕೆಲವು ಅಭಿಪ್ರಾಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಚಿತ್ರದುರ್ಗ ಪಾಳೆಯಗಾರರ ಪೂರ್ವಿಕರು ಮೊದಲು ಕುಮ್ಮಟದುರ್ಗದ ಕುಮಾರರಾಮನಲ್ಲಿ ಆನೆಯ ರಾವುತರಾಗಿ ಸೇವೆಸಲ್ಲಿಸಿದ್ದರು. ಮೊಹಮ್ಮದ್-ಬಿನ್-ತುಘಲಕ್ ಕುಮ್ಮಟದುರ್ಗವನ್ನು ಆಕ್ರಮಿಸಿಕೊಂಡು ಅನೇಕರನ್ನು ಸೆರೆ ಹಿಡಿದು ದೆಹಲಿಗೆ ಕೊಂಡೊಯ್ದು ಸೆರೆಯಲ್ಲಿಟ್ಟಿದ್ದನು. ಅವರಲ್ಲಿ ಕಾಮಗೇತಿ ವಂಶದ ತಿಮ್ಮಣ್ಣನಾಯಕನೂ ಒಬ್ಬ. ಈ ಮನೆತನದ ಮೂಲಪುರುಷ ಚಿತ್ರನಾಯಕ ದೆಹಲಿಯ ಸುಲ್ತಾನನಲ್ಲಿ ವಜೀರನಾಗಿದ್ದನು; ಸುಲ್ತಾನನ ಆಡಳಿತದಲ್ಲಿ ನಾಡ ತಳವಾರನಾಗಿ ನೇಮಕಗೊಂಡಿದ್ದ ಇವನು ಆನೆಗಳನ್ನು ಪಳಗಿಸುವುದರಲ್ಲಿ ವೀರನಾಗಿದ್ದನು. ಒಮ್ಮೆ ದೆಹಲಿಯ ಬೀದಿಯಲ್ಲಿ ಜನಕಂಟಕವಾಗಿದ್ದ ಮದಿಸಿದ ಆನೆಯನ್ನು ಚಿತ್ರನಾಯಕನು ಹಿಡಿದು ಪಳಗಿಸಿದ್ದನು. ಇದರಿಂದ ಸುಲ್ತಾನನು ಚಿತ್ರನಾಯಕನಿಗೆ 'ಮದಕರಿನಾಯಕ' ಎಂಬ ಬಿರುದನ್ನು ನೀಡಿ ಗೌರವಿಸಿದ್ದನು. ಈ ಕಾರಣದಿಂದಲೇ ಇವನ ವಂಶಸ್ಥರೆಲ್ಲಾ 'ಮದಕರಿನಾಯಕ' ಎಂಬ ಅಭಿದಾನದಿಂದ ಪ್ರಸಿದ್ಧರಾಗಿದ್ದಾರೆ.

ಚಿತ್ರದುರ್ಗ ಸಂಸ್ಥಾನದ ಸ್ಥಾಪಕ ತಿಮ್ಮಣ್ಣನಾಯಕ ಮತ್ತು ಈ ವಂಶಸ್ಥರ ಮೂಲ ನೆಲೆ ಸಂತೆಬೆನ್ನೂರು ಬಳಿಯ ಮತ್ತಿ. ಈ ನೆಲೆ ಮಲೆನಾಡಿನಿಂದ ಆನೆಗಳನ್ನಿಡಿದು ತಂದು ಪಳಗಿಸಿ, ತರಬೇತುಗೊಳಿಸಿ ವಿಜಯನಗರ ಸೈನ್ಯಕ್ಕೆ ಕಳುಹಿಸಿಕೊಡುತ್ತಿದ್ದ ನೆಲೆಯಾಗಿತ್ತು. ಇಲ್ಲಿ ತಿಮ್ಮಣ್ಣನಾಯಕ ಹಾಗೂ ಮನೆತನದ ಮೂಲಪುರುಷ ಚಿತ್ರನಾಯಕರು ಪಡೆದಿದ್ದ ತರಬೇತಿ, ಕುಮ್ಮಟದುರ್ಗದ ಕುಮಾರರಾಮನಲ್ಲಿ ಆನೆಯ ರಾವುತರಾಗಿ ಸೇವೆಸಲ್ಲಿಸಿದ್ದ ಇವರಿಗೆ ದೆಹಲಿ ಸುಲ್ತಾನನ ಜನಕಂಟಕ ಆನೆಯನ್ನು ಹಿಡಿದು ಪಳಗಿಸಲು ಸುಲಭ ಸಾಧ್ಯವಾಗಿರಬೇಕು. ಮತ್ತಿ ಕೇಂದ್ರಿತ ಸಂತೆಬೆನ್ನೂರು ಪ್ರದೇಶವನ್ನು 'ಮದಕರಿ'ನಾಡು ಎಂದು ಕರೆಯಲಾಗುತ್ತಿತ್ತು. ಏಕೆಂದರೆ, ಈ ಪ್ರದೇಶದಲ್ಲಿ ವಿಜಯನಗರದ ಹರಿಹರಯ್ಯ ಎಂಬುವವನು ಬೇಟೆಯಾಡಲು ಹೋದಾಗ ಮದಗಜವೊಂದನ್ನು ಹಿಡಿದಿದ್ದನು. ಆದ್ದರಿಂದ, ಆ ಸ್ಥಳಕ್ಕೆ 'ಮದಕರಿ' ಎಂಬ ಹೆಸರು ಪ್ರಚಲಿತವಾಗಿತ್ತು. ಈ ಕಾರಣದಿಂದಲೇ ಮತ್ತಿ ಸಂತತಿಯ ಎರಡನೇ ಅರಸನಾಗಿದ್ದ ಓಬಣ್ಣ ನಾಯಕನಿಗೆ ರಸಸಿದ್ಧರು 'ಮದಕರಿ' ಎಂದು ಕರೆದಿರುವ ಸಾಧ್ಯತೆಯೂ ಇದೆ. ದೆಹಲಿಯಿಂದ ಬಂದವರೆಂದು ಕರೆಯಲ್ಪಟ್ಟಿರುವ ಚಿತ್ರದುರ್ಗ ಪಾಳೆಯಗಾರರು ವಾಲ್ಮೀಕಿ ಗೋತ್ರ ಹಾಗೂ ಕಾಮಗೇತಿ ವಂಶಕ್ಕೆ ಸೇರಿದವರು. ಚರಿತ್ರೆಯಲ್ಲಿ ಇವರು 'ಕಸ್ತೂರಿ' ಎಂಬ ಅಭಿದಾನದೊಂದಿಗೆ ಗುರುತಿಸಿಕೊಂಡಿದ್ದಾರೆ. ತಮ್ಮ ಆಡಳಿತಾತ್ಮಕ ಶಾಸನಗಳಲ್ಲಿ ತಮ್ಮನ್ನು 'ಶ್ರೀಮನ್ಮಹಾನಾಯಕಾಚಾರ್ಯ' ಎಂಬ ಬಿರುದಿನಿಂದ ಗುರುತಿಸಿಕೊಂಡಿದ್ದಾರೆ.

ಚಿತ್ರದುರ್ಗ ಪಾಳೇಗಾರರನ್ನು ಒಟ್ಟಾಗಿ ಕೆಲವು ಇತಿಹಾಸಕಾರರು ಮೆದಕೇರಿ ನಾಯಕರು ಎಂದು ಕರೆದಿರುವುದುಂಟು. ಶ್ರೀ ನಾಯಕರ ಮೂಲಪುರುಷ ಚಿತ್ರನಾಯಕನು ದೆಹಲಿಯಲ್ಲಿ ಮದಿಸಿದ ಕರಿ ಅಂದರೆ ಆನೆಯನ್ನು ಮದಿಸಿದರಿಂದ ಮದಕರಿನಾಯಕ ಎಂಬ ಬಿರುದನ್ನು ಅಲ್ಲಿಯ ಸುಲ್ತಾನ ನೀಡಿದನೆಂದು ಅದೇ ಮುಂದೆ ಇವರ ಹೆಸರಾಯಿತು ಎಂದು ಸಮಕಾಲಿನ ಸಂದರ್ಭದಲ್ಲಿ ಪ್ರಚಲಿತವಾಗಿದೆ. ಚಿತ್ರದುರ್ಗದ ಹೆಸರಂತ ಶಾಸನ ತಜ್ಞರಾದ ಡಾ. ಬಿ ರಾಜಶೇಖರಪ್ಪನವರ ಪ್ರಕಾರ “ಚಿತ್ರದುರ್ಗ ಪಾಳೇಗಾರರು ಹೊರಡಿಸಿರುವ ಶಾಸನಗಳಲ್ಲಿ ಮದಕರಿ ನಾಯಕ ಎಂಬ ಹೆಸರಿನ ರೂಪಗಳಿಲ್ಲ. ಆದರೆ ಮೆದಕೇರಿನಾಯಕ, ಮೆದಿಕೇರಿ ನಾಯಕ ಮುಂತಾದ ರೂಪಗಳು ಕಂಡುಬರುತ್ತವೆ. ಆದ್ದರಿಂದ ಮೆದಕೇರಿನಾಯಕ ಎಂಬುದು ಚಾಲುಕ್ಯ ಹೊಯ್ಸಳ ಇತ್ಯಾದಿಗಳಂತೆ ಒಂದು ರಾಜವಂಶದ ಹೆಸರಾಗಿರದೆ ಅದು ಕೇವಲ ವ್ಯಕ್ತಿನಾಮ ಮಾತ್ರ ಆಗಿದೆ.” ಇವರು ತಮ್ಮ ‘ಪ್ರಾಚೀನ ಚಿತ್ರದುರ್ಗ’ ಎಂಬ ಕೃತಿಯ ಪುಟ ಸಂಖ್ಯೆ 177ರಲ್ಲಿ “ಪುಟ್ಟಣ್ಣನವರು ಹಸ್ತಪ್ರತಿಗಳಲ್ಲಿ ಕಂಡ ಮೆದಕೇರಿ ಎಂಬ ರೂಪವನ್ನು ‘ಮದಕರಿ’ ಎಂಬ ಶಿಷ್ಟ ರೂಪದ ಅಪ–ರೂಪ ಎಂದು ಭಾವಿಸಿ ಈ ಮೇಲಿನಂತೆ ಬರೆದಿರುವುದು ಸ್ಪಷ್ಟ. ಇದರಿಂದ ‘ಮೆದಕೇರಿ’ ಎಂಬುದರ ಶಿಷ್ಟರೂಪ ‘ಮದಕರಿ’ ಎಂದು ಮೊದಲು ಘೋಷಿಸಿದವರು ಅವರೇ ಎನ್ನಬೇಕಾಗುತ್ತದೆ.” ಎಂದು ದಾಖಲಿಸಿದ್ದಾರೆ. ಒಟ್ಟಾರೆ ಇವರ ಅಭಿಪ್ರಾಯ ‘ಮೆದಕೇರಿ’ ಶಾಸನೋಕ್ತವಾದದ್ದು, ‘ಮದಕರಿ’ ಶಾಸನೋಕ್ತವಾದದ್ದಲ್ಲ.

ಈ ಸಂದರ್ಭದಲ್ಲಿ ಡಾ. ಎನ್ ಚಿನ್ನಸ್ವಾಮಿ ಸೋಸಲೆ ಅವರ ಅಭಿಪ್ರಾಯವನ್ನು ಅಗತ್ಯ ಪರಿಗಣಿಸಲೇ ಬೇಕಾಗುತ್ತದೆ. ಅವರ ಪ್ರಕಾರ “ಸರ್ಕಾರ ನೀಡುವ ಬಿರುದುಗಳಿಗೆ ದಾಖಲೆಗಳಿರುತ್ತವೆ. ಆದರೆ, ಜನತೆ ನೀಡುವ ಬಿರುದುಗಳಿಗೆ ದಾಖಲೆಗಳಿರುವುದಿಲ್ಲ. ಅದರಂತೆ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಗೆ ಸಂವಿಧಾನ ಅಥವಾ ಸರ್ಕಾರದ ಪಾತ್ರ ನಿರ್ವಹಿಸುತ್ತಿದ್ದ ವೈದಿಕರು ನೀಡಿದ ಬಿರುದುಗಳಿಗೆ ದಾಖಲೆಗಳಿವೆಯೇ ವಿನಃ ಸಾಮಾನ್ಯರು ನೀಡಿರುವ ಬಿರುದುಗಳಿಗೆ ದಾಖಲೆಗಳು ಕಂಡುಬರುವುದಿಲ್ಲ.” ಏಕೆಂದರೆ, ಇಡೀ ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಅವಲೋಕಿಸಿದಾಗ ಯಾವುದೇ ಅಮರನಾಯಕರು ಸಾಮ್ರಾಟನಿಗೆ ನೀಡಿರುವ ಬಿರುದುಗಳು ದಾಖಲುಗೊಂಡಿರುವ ಒಂದೇ ಒಂದು ದಾಖಲೆಯೂ ಕಂಡುಬರುವುದಿಲ್ಲ. ಅಂದರೆ ಅಮರನಾಯಕರು ನೀಡಿದ್ದ ಬಿರುದುಗಳು ವೈದಿಕ ವ್ಯವಸ್ಥೆ ನೀಡಿದ್ದ ಬಿರುದುಗಳಂತೆ ದಾಖಲಾಗಿಲ್ಲ ಎಂಬುದು ಸ್ಪಷ್ಟ.

ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರ ಈ ಮೇಲಿನ ಮಾತನ್ನು ಅನುಸರಿಸಿ ಚಿತ್ರದುರ್ಗ ಪಾಳೆಯಗಾರರ ಮದಕರಿನಾಯಕ ಎಂಬ ಬಿರುದುಗೆ ಅನ್ವಯಿಸಿ ಹೇಳುವುದಾದರೆ, ಚಿತ್ರದುರ್ಗ ಪಾಳೇಗಾರರ ಮೊಹರು ಆಗಿರುವ ಮೂಲ ದಾನಪತ್ರಗಳು, ತಾಮ್ರಶಾಸನ ಹಾಗೂ ಶಿಲಾಶಾಸನಗಳಲ್ಲಿ ಮೆದಕೇರಿನಾಯಕ ಎಂದು ದಾಖಲಾಗಿದ್ದರೆ, ಜನ ಹಾಗೂ ಜನಪದರು ನೀಡಿರುವ ಮದಕರಿನಾಯಕ ಎಂಬ ಬಿರುದು ದಾಖಲಾಗಿರುವುದಿಲ್ಲ. ಆಡಳಿತದ ದಾಖಲಾತಿಗಳಲ್ಲಿ ದಾಖಲಾಗಿರುವ

ಮೆದಕೇರಿನಾಯಕ ಎಂಬ ಬಿರುದುಗಿಂತ ಜನಪದರು ನೀಡಿರುವ ಮದಕರಿನಾಯಕ ಎಂಬ ಬಿರುದು ಹೆಚ್ಚು ಶಾಶ್ವತ ಹಾಗೂ ಮಹತ್ವದ್ದಾಗಿ ಇಂದಿಗೂ ಬಳಸಲ್ಪಡುತ್ತಿದೆ ಎಂಬುದಂತೂ ಸ್ಪಷ್ಟ. ಅಂದರೆ,'ಮೆದಕೇರಿ' ಎಂಬುದಕ್ಕೆ ಕೊಟ್ಟಿರುವ ಸಂಸ್ಕೃತೀಕರಣದ ರೂಪವೇ 'ಮದಕರಿ'ಯಾಗಿದೆ. ಆದ್ದರಿಂದಲೇ, ಪ್ರಸ್ತುತ ಲೇಖನದಲ್ಲಿಯೂ ಸಮಕಾಲಿನ ಸಂದರ್ಭದಲ್ಲಿ ಚಿತ್ರದುರ್ಗ ಪಾಳೆಯಗಾರರಿಗೆ ಬಳಕೆಯಾಗುತ್ತಿರುವ ಜನಪದರ ಹಾಗೂ ಹೆಚ್ಚಿನ ಸಂಶೋಧಕರು ಬಳಸಿಕೊಂಡಿರುವ 'ಮದಕರಿ' ಎಂಬ ಪದವನ್ನೇ ಬಳಸಿಕೊಳ್ಳಲಾಗಿದೆ.

ಒಂದು ಕಾಲದ ಸಾಹಸಿ ರಾಜನೊಬ್ಬ ತನ್ನ ಸಮಕಾಲೀನ ಜನರ ಮೇಲೆ ಪ್ರಭಾವ ಬೀರಬಲ್ಲವನಾಗಿರುತ್ತಾನೆ. ಕೆಲವೊಮ್ಮೆ ಅವನು ಮರಣಿಸಿದ ಹಲವು ಶತಮಾನಗಳ ನಂತರ ಅವನ ಸಾಹಸ ಚರಿತ್ರೆಯು ಮನ್ನಣೆಗಳಿಸಿ, ಆಯಾ ಕಾಲದವರ ಮೇಲೆ ಪ್ರಭಾವ ಬೀರುವುದೂ ಸಾಧ್ಯವಿದೆ. ರಾಜ ವೀರಮದಕರಿ ನಾಯಕ ತನ್ನ ಕಾಲದಲ್ಲಿಯೇ ಅಲ್ಲದೇ ಆನಂತರವೂ ಕರ್ನಾಟಕದ ಪಾಳೆಯಗಾರರ ಚರಿತ್ರೆಯಲ್ಲಿ ತನ್ನ ಪ್ರಭಾವ ಬೀರಿದ್ದಾನೆ. ಅವನ ಪ್ರಭಾವ ಹೇಗಿದೆ ಎಂದರೆ, ಅವನನ್ನು 'ಮದಿಸಿದ ಕರಿಯ ಮದವಡಗಿಸುತ್ತಿರುವಂತೆ' ಮತ್ತು ಅವನ ಯುದ್ಧಾಸ್ತ್ರಗಳಾದ 'ಖಡ್ಗ-ಗುರಾಣಿ'ಗಳನ್ನು ಕಲಾಕೃತಿಗೊಳಿಸಿ ತಮ್ಮ ಮನೆ ಮತ್ತು ವಾಹನಗಳ ಮೇಲೆ ಮುದ್ರಿಸಿಕೊಳ್ಳುವಷ್ಟು. 'ಮದಕರಿ' ಎಂಬ ಬಿರುದು ಕೇವಲ ಚಿತ್ರದುರ್ಗ ವ್ಯಾಪ್ತಿಗಷ್ಟೇ ಸೀಮಿತವಾಗಿರದೇ, ಇಡೀ ಕರ್ನಾಟಕವನ್ನೇ ವ್ಯಾಪ್ತಿಕರಿಸಿಕೊಂಡಿದೆ.

ಕರ್ನಾಟಕದಲ್ಲಿ ಆಳ್ವಿಕೆ ಮಾಡಿರುವ ಸುರಪುರ, ಆನೆಗೊಂದಿ, ಜರಿಮಲೆ, ಗುಂತಗೊಳ, ದೇವದುರ್ಗ, ಕನಕಗಿರಿ, ಗುಡೇಕೋಟೆ, ನಾಯಕನಹಟ್ಟಿ, ಹರತಿ ಮೊದಲಾದ ಬೇಡ ಪಾಳೆಯಗಾರರ ವ್ಯಾಪ್ತಿಗೆ ಒಳಪಟ್ಟಿರುವವರೂ ಸಹ ಆ ಪ್ರದೇಶದ ರಾಜರ ಬಿರುದು ಹಾಗೂ ರಾಜ್ಯದ ಹೆಸರುಗಳನ್ನು ಮೀರಿ ಚಿತ್ರದುರ್ಗ ಪಾಳೆಯಗಾರರು ಹೊಂದಿದ್ದ 'ಮದಕರಿ' ಎಂಬ ಬಿರುದನ್ನೇ ಬಳಸುತ್ತಿದ್ದಾರೆ. ಚಿತ್ರದುರ್ಗ ಸಂಸ್ಥಾನವನ್ನು ಮೊದಲು, ಹೈದರ್ ಅಲಿ ಆಕ್ರಮಣಗಳಿಂದ ಉಳಿಸಿಕೊಳ್ಳಲು, ನಂತರ ತನ್ನ ಬದುಕಿನ ಕೊನೆಯ ದಿನಗಳಲ್ಲಿ ತನ್ನ ಸಂಸ್ಥಾನವನ್ನು ಮರಳಿ ಪಡೆಯಲು ಹೈದರನ ಬಂಧನದಲ್ಲಿದ್ದು, ವಿಷ ಪ್ರಾಶನಕ್ಕೆ ತುತ್ತಾಗುವ ಕಾಲದವರೆಗಿನ ರಾಜಾ ವೀರಮದಕರಿ ನಾಯಕನ ಸಾಹಸಗಾಥೆಯ ಚರಿತ್ರೆಯನ್ನು ತನ್ನ ಆಂತರ್ಯದಲ್ಲಿ ಹಿಡಿದಿಟ್ಟುಕೊಂಡಿರುವ ಏಕೈಕ ಪದವೆಂದರೆ, ಅದು 'ಮದಕರಿ'. ಮದಕರಿ ಇದು ಚಿತ್ರದುರ್ಗ ಪಾಳೆಯಗಾರರ ಒಟ್ಟಾರೆ ಯುದ್ಧ ಚರಿತ್ರೆಯನ್ನು ಸಂಕ್ಷೇಪಿಸಿಕೊಂಡಿರುವ ಒಂದು ಪರಿಭಾಷಿಕ ಪದವಾಗಿ ಬಳಕೆಯಾಗುತ್ತಿದೆ. ರಾಜಾ ವೀರಮದಕರಿ ನಾಯಕನ ಸಾಹಸ ಚರಿತ್ರೆಯನ್ನು ನೆನಪಿನ ಆಳಕ್ಕೆ ತಂದುಕೊಂಡಾಗ, ಅದು ಪದಗಟ್ಟಿ 'ಮದಕರಿ'ಯೊಂದಿಗೆ ತೆರೆದುಕೊಳ್ಳುತ್ತದೆ.

ಒಟ್ಟಾರೆ ಹೇಳುವುದಾದರೆ, ಚರಿತ್ರೆಕಾರರು ದಾಖಲೆಸಹಿತ ಹೇಳಿದ ಮಾತನ್ನು ಜನಪದರು ಒಪ್ಪದಿರುವ ಹಾಗೂ ಮೌಖಿಕವಾಗಿ ಕಟ್ಟಿರುವ ಜನಪದೀಯ ಮಾತನ್ನು

ಚರಿತ್ರೆಕಾರರು ಒಪ್ಪದಿರುವ ಅನೇಕ ನಿದರ್ಶನಗಳು ಚರಿತ್ರೆಯಲ್ಲಿ ದಾಖಲಾಗಿವೆ. ಅದರಂತೆ ಚರಿತ್ರೆಕಾರರು ದಾಖಲೆಸಹಿತ ಹೇಳಿರುವ 'ಮೆದಕೇರಿ' ಮತ್ತು ಮೌಖಿಕವಾಗಿ ಜನಪದರು ಅಭಿಮಾನಿಸಿರುವ 'ಮದಕರಿ' ಪದ ಬಳಕೆಯೂ ಅಂತಹ ಒಂದು ನಿದರ್ಶನವಾಗಿ ಚಿತ್ರದುರ್ಗ ಪಾಳೆಯಗಾರರ ಚರಿತ್ರೆಯಲ್ಲಿ ದಾಖಲುಗೊಂಡು ಪ್ರಚಲಿತದಲ್ಲಿದೆ.

**ಪರಾಮರ್ಶನ ಗ್ರಂಥಗಳು:**

1. ರಾಜಶೇಖರಪ್ಪ ಬಿ., (2016), ಪ್ರಾಚೀನ ಚಿತ್ರದುರ್ಗ, ಚಿತ್ರದುರ್ಗ: ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ.
2. ಲಕ್ಷ್ಮಣ್ ತೆಲಗಾವಿ ಮತ್ತು ಶ್ರೀನಿವಾಸ್ ಎಂ.ವಿ. (ಸಂ), (1976), ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಚಿತ್ರದುರ್ಗ: ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣಾ ಸಮಿತಿ.
3. ನಂಜುಂಡಸ್ವಾಮಿ ಎ.ಎಸ್., (2012), ಪಾಳೆಯಗಾರರು ಮತ್ತು ಒಡೆಯರ ಇತಿಹಾಸ, ಧಾರವಾಡ: ಸಮಾಜ ಪುಸ್ತಕಾಲಯ.
4. ಗಂಗಾನಾಯಕ್ ಕೆ.ಎನ್. (ಪ್ರ.ಸಂ) ಮತ್ತು ಬಿ.ಆರ್. ಭಾರತೀ (ಸಂ), (2011), ಪಾಳೇಗಾರರ ಕಾಲದ ಶಾಸನಗಳು: ಸಂಪುಟ–2, ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.
5. ರಾಜಶೇಖರಪ್ಪ ಬಿ. (ಸಂ), (2007), ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು, ಬೆಂಗಳೂರು: ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ.
6. ರೇವಣಸಿದ್ದಪ್ಪ ಎಸ್., (2014), ವಿಜಯನಗರ ಪತನಾನಂತರ ವೀರಶೈವ ಹಾಗೂ ಲಿಂಗಾಯತ ಧರ್ಮದವರಲ್ಲಾದ ಸಾಂಸ್ಕೃತಿಕ ಸ್ಥಿತ್ಯಂತರಗಳ ಅಧ್ಯಯನ (ಕ್ರಿ.ಶ. 1565 ರಿಂದ ಸಮಕಾಲೀನದವರೆಗೆ), ಹಂಪಿ: ಕನ್ನಡ ವಿಶ್ವವಿದ್ಯಾಲಯ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ).